ಪಂಡಿತರನ್ನು ಎದುರುಹಾಕಿಕೊಂಡಿದ್ದ ಜೈನ ಮತ್ತು ಬೌದ್ಧಪಂಥಗಳು ಸಾಕಷ್ಟು ಮುನ್ನಲೆಗೆ ಬಂದು ಶೂದ್ರಾತಿ ಶೂದ್ರರನ್ನು ಸಮೀಪಕ್ಕೆ ತಂದುಕೊಂಡಿದ್ದವು. ಇದರ ಜೊತೆಗೆ ಈ ಪುಸ್ತಕದಲ್ಲಿ ಅಷ್ಟಾಗಿ ಚರ್ಚೆಗೆ ಬಾರದ ಆರು ಜನ ಪಾಷಂಡಿಗಳು ತಮ್ಮದೇ ತಾತ್ವಿಕತೆಗಳನ್ನು ರೂಪಿಸಿಕೊಂಡಿದ್ದರು. ಜೈನರೊಂದಿಗೆ ಗುದ್ದಾಡಿ 'ನಿಯತಿವಾದ'ವನ್ನು ಮುಂದೊಡ್ಡಿದ ಮಕ್ಕಲಿಗೋಸಾಲನಿದ್ದ. ಇಷ್ಟಾದರೂ ಬುದ್ಧನ ತತ್ವಗಳು ಉಪಖಂಡ ಮತ್ತು ಇತರ ದಿಕ್ಕುಗಳಲ್ಲಿ ಉಂಟುಮಾಡಿದ ಸಂಚಲನಗಳು ಅಂತ್ಯಜರ ನಾಡಿಮಿಡಿತಗಳನ್ನು ಅರ್ಥಮಾಡಿಕೊಂಡವು. ಇದೇ ಕಾಲದಲ್ಲಿದ್ದ ಮಕ್ಕಲಿಗೋಸಾಲಿ ಮತ್ತು ಪಾಷಂಡಿಗಳು ಬುದ್ಧನೊಂದಿಗೆ ಅನೇಕ ಭಿನ್ನಾಭಿಪ್ರಾಯಗಳಿದ್ದರೂ ತಮ್ಮದೇ ಶಿಷ್ಯರನ್ನು ಬೆಳೆಸಿಕೊಂಡಿದ್ದರು. ನಂತರದ ಶಂಕರಚಾರ್ಯರ ಮರು ಅದ್ವೈತದ ವ್ಯಾಖ್ಯಾನಗಳು ಪ್ರಭುತ್ವಗಳಿಗೂ ಮತ್ತು ಅಂದಿನ ಮತಗಳಿಗೆ ದಿಕ್ಕು ತಪ್ಪಿಸಿದವು. ಬಹುಶಃ ಈ ಕೃತಿಯ ವೈದಿಕ ವಿದ್ವಾಂಸರಾದ ಅವಧಾನಿ ಅಶ್ವತ್ಥ ನಾರಾಯಣ ಅವರು ಶಂಕರರ ದರ್ಶನವನ್ನೇ 'ದರ್ಶನಶಾಸ್ತ್ರ' ಎಂದು ಕರೆಯುತ್ತಾರೆ. ಅವಧಾನಿಗಳಿಗೆ ವೈದಿಕದ ಮತ್ತು ಶಂಕರರ ಜಗತ್ತು, ಜೀವ ಮತ್ತೊಂದು ಜಗತ್ಕಾರಣ ಈ ಮೂರೇ ದರ್ಶನಶಾಸ್ತ್ರವನ್ನು ರೂಪಿಸಿರುವುದು. ನೇರವಾಗಿ ಅಲ್ಲದಿದ್ದರೂ ಶಂಕರ ವೈದಿಕದ ಪುನರ್ ಜ್ಜೀವಕ. ಆದರೆ, ಜನಸಾಮಾನ್ಯರ ಲೋಕದೃಷ್ಟಿಯನ್ನು ಬೆಳೆಸಿದ ವಿಸ್ತರಿಸಿದ ಶಿವಪಂಥಗಳು ಇಲ್ಲಿ ಆಳವಾಗಿ ಚರ್ಚೆಗೆ ಬಂದಿಲ್ಲ. ಇದು ಇನ್ನೊಂದು ಮಿತಿ. ಅವಧಾನಿಗಳ ಬಹುದೊಡ್ಡ ಮಿತಿ ಇರುವುದು ವೈದಿಕತೆಯನ್ನು ಬರೀ ತರ್ಕವಾದದಲ್ಲೇ ಬಂಧಿಸಿಡುವುದು. ಇದು ಎಷ್ಟರಮಟ್ಟಿಗೆ ಜಡವೆಂದರೆ ಜಗತ್ತೇ ಬ್ರಹ್ಮ ಎಂಬಷ್ಟು. (ಇದರ ಚರ್ಚೆಗೆ ನೋಡಿ ಪು.39) ವೇದಗಳು ಬ್ರಹ್ಮನ ಮುಖದಿಂದಲೇ ಉದ್ಭವಗೊಂಡಿವೆ ಎಂಬ ವಾದವೂ ಇದೆ. ಆದರೆ, ಇದನ್ನು ಸಿದ್ಧಸೆಟ್ಟಿ ಹೇಳಿರುವ 'ಜನಪದ ಮಹಾಭಾರತ'ದಲ್ಲಿ ವೇದಗಳಿಗೂ ಬ್ರಹ್ಮನಿಗೆ ಬಹುದೊಡ್ಡ ವಾಗ್ವಾದ ನಡೆಯುತ್ತದೆ. ಅಲ್ಲಿ ಬ್ರಹ್ಮ ಇಡೀ ಸೃಷ್ಟಿ, ಸ್ಥಿತಿ, ಲಯಗಳಿಗೆ ನಾನೇ ಒಡೆಯ ಎಂದಾಗ ವೇದಗಳು ನಗುತ್ತವೆ. ನೀನು ಸೃಷ್ಟಿಗೆ ಮಾತ್ರ ಒಡೆಯ ಎನ್ನುತ್ತವೆ. ಬ್ರಹ್ಮನಿಗೆ ಗರ್ವಭಂಗವಾಗಿ ವೇದಗಳನ್ನು ಅಟ್ಟಿಸಿಕೊಂಡು ಹೋಗುತ್ತಾನೆ. ಅಂತಿಮವಾಗಿ ನಾರದ ತ್ರಿಮೂರ್ತಿಗಳೊಂದಿಗೆ ಸಮಸ್ಯೆ ಬಗೆಹರಿಸುತ್ತಾನೆ. ಇದು ಒಂದು. ಮತ್ತೊಂದು ನಮ್ಮ ಅನೇಕ ಜನಪದ ಪುರಾಣಗಳಲ್ಲಿ ಸೃಷ್ಟಿ ಹುಟ್ಟಿಕೊಂಡಿದ್ದು ಬಹುಪಾಲು ಶಿವ–ಪಾರ್ವತಿಯರಿಂದ. ಇವರ ಕಲ್ಪನೆಗಳು ವೇದಪೂರ್ವದಲ್ಲೇ ಇದ್ದಿರಬಹುದು. ಇದನ್ನು ಯಾಕೆ ಹೇಳಿದೆ ಅಂದರೆ ನಾವು ಸಮಾಜಶಾಸ್ತ್ರೀಯ ದೃಷ್ಟಿಯಿಂದ ನೋಡಿದರೂ ಶೂದ್ರರು ತಮ್ಮ ಜನಜೀವನ ಕ್ರಮಗಳನ್ನು ವೈದಿಕದ ಯಾವ ಕಟ್ಟುಪಾಡುಗಳನ್ನು 'ನಿಯಮಬದ್ಧ'ವಾಗಿ ಸ್ವೀಕರಿಸಲಿಲ್ಲ. ನಂತರವೂ ಕೂಡ ಶಂಕರರಂತಹವರ ವ್ಯಾಖ್ಯಾನಗಳನ್ನು ಪಾಲಿಸುವ ಅಗತ್ಯವೂ ಇರಲಿಲ್ಲ. ಬಹುಪಾಲು ಅವೈದಿಕ ತತ್ವಜ್ಞಾನ ರೂಪುಗೊಂಡಿರುವುದು 'ನಿಸರ್ಗ'ದ ನಿಯಮಗಳಿಂದ. ಇವರ ಚರ್ಚೆಯಲ್ಲಿ ಯಜ್ಞದ ಕುರಿತು ನಡೆಯುವ ಸಂವಾದ ನೀರಿನತತ್ವದ ಬಗ್ಗೆ ನಡೆಯುವುದಿಲ್ಲ. ಅವಧಾನಿಗಳು ಹೇಳುವ ಮತ್ತೊಂದು ನೇರವಾದ ಸತ್ಯವೆಂದರೆ ಶಂಕರರು ಅದ್ವೈತವನ್ನು ಶುದ್ಧಮಾಡಲು ಬಂದವರೆಂದು. ಹಾಗಿದ್ದಲ್ಲಿ ಮೂಲದಲ್ಲಿ ಅದು ಹೇಗಿತ್ತು ಎಂಬುದನ್ನು ಅವರೇ ಗಂಭೀರವಾಗಿ ಹೇಳಿಲ್ಲ. 'ಬುದ್ಧನ ಕಾಲಕ್ಕೆ ಪೂರ್ವದಲ್ಲಿಯೇ ಬ್ರಾಹ್ಮಣ ತತ್ವಗಳ ವಿರುದ್ಧ ದಂಗೆಗಳು ಪ್ರಾರಂಭವಾದಂತೆ ಕಾಣುತ್ತವೆ. ಬುದ್ಧನ ಕಾಲದಲ್ಲಿದ್ದ 63 ತತ್ವಶಾಖೆಗಳನ್ನು (ಇವೆಲ್ಲ ಅಬ್ರಾಹ್ಮಣವಾಗಿರಬೇಕು) ಸುತ್ತ ನಿಪಾತವು ಹೇಳುತ್ತದೆ'